# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ
## ಪುತ್ತೂರು

SDR 38/58-59

ಸ್ಥಾಪನೆ : 1958

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು - 574201, ದ. ಕ.
ದೂರವಾಣಿ : 08251 - 233274, 9449318792 : website : www.pcics.in

ರಾಜ್ಯ ಸರಕಾರದ ಪಾಲು ಬಂಡವಾಳ ಹೊಂದಿರುವ ಸಂಸ್ಥೆ

**67** ವರ್ಷಗಳ ಸುದೀರ್ಘ ಗ್ರಾಹಕರ ಸೇವೆಯಲ್ಲಿ



ದಿ| ಕೃಷ್ಣ ಮೂಲ್ಯ
ಸ್ಥಾಪಕಾಧ್ಯಕ್ಷರು

2024-25ನೇ ಸಾಲಿನ

**ವರದಿ ಮತ್ತು ಲೆಕ್ಕ ಪತ್ರಗಳು**

# ವಾರ್ಷಿಕ ಮಹಾಸಭೆ

ದಿನಾಂಕ : 24.08.2025, ಆದಿತ್ಯವಾರ
ಸ್ಥಳ : ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸಭಾ ಭವನ, ಪುತ್ತೂರು, ದ. ಕ.

## ಆಮಂತ್ರಣ

ಸಹಕಾರದಿಂದ ಪ್ರಗತಿ - ಪ್ರಗತಿಗಾಗಿ ಸಹಕಾರ

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ ಪುತ್ತೂರು

## ಆಡಳಿತ ಮಂಡಳಿಯ ಸದಸ್ಯರು

ಸ್ಥಾಪನೆ : 1958



ಶ್ರೀ ಭಾಸ್ಕರ ಎಂ. ಪೆರುವಾಯಿ, B.A.(Law)LLB. ವಕೀಲರು
ಅಧ್ಯಕ್ಷರು
✆: 08251-231897, 9448956897, 9364015797



ಶ್ರೀ ದಾಮೋದರ ಕುಲಾಲ್, B.Com.
ಉಪಾಧ್ಯಕ್ಷರು
✆: 9448624589

### ನಿರ್ದೇಶಕರು



ಶ್ರೀ ಬಿ.ಎಸ್. ಕುಲಾಲ್
✆: 9481761699



ಶ್ರೀ ಗಣೇಶ್ ಪಿ.
✆: 9448550114



ಶ್ರೀ ಪದ್ಮಕುಮಾರ್ ಎಚ್.
✆: 9972725645



ಶ್ರೀ ಪೂವಪ್ಪ ಕಡಂಬಾರು
✆: 8971976923



ಶ್ರೀ ಸೇಸಪ್ಪ ಕುಲಾಲ್
✆: 9845295797



ಶ್ರೀ ಪ್ರಶಾಂತ್ ಬಂಜನ್
✆: 9880014232



ಶ್ರೀ ನಾಗೇಶ್ ಕುಲಾಲ್
✆: 9448625453



ಶ್ರೀಮತಿ ರೇಖಾ ದಿನೇಶ್
✆: 9481957506



ಶ್ರೀಮತಿ ರಂಜಿತ
✆: 9740687999



ಶ್ರೀ ಎಸ್. ಜನಾರ್ದನ ಮೂಲ್ಯ
ಮುಖ್ಯ ಕಾರ್ಯನಿರ್ವಹಣಾಧಿಕಾರಿ
✆: 9449318792

# ಅಧ್ಯಕ್ಷರ ಲೇಖನಿಯಿಂದ.....



ಸಮಸ್ತ ಸದಸ್ಯರನ್ನು 67ನೇ ವಾರ್ಷಿಕ ಮಹಾಸಭೆಗೆ ಗೌರವಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಚುನಾವಣೆ ಬಹುಮುಖ್ಯ ಅಂಗ. ನಮ್ಮ ಸಹಕಾರ ಸಂಘದಲ್ಲಿ ನನ್ನ 2ನೇ ಅವಧಿಯು ಕಳೆದ ಫೆಬ್ರವರಿ 2025ರಲ್ಲಿ ಮುಗಿದಿದ್ದು ನಂತರ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ನಮ್ಮ ತಂಡಕ್ಕೆ ಮತ್ತೊಮ್ಮೆ ಅವಕಾಶ ಕಲ್ಪಿಸಿ ಅವಿರೋಧವಾಗಿ ಆಯ್ಕೆಯಾಗುವಲ್ಲಿ ಸಹಕರಿಸಿದ ಸರ್ವ ಸದಸ್ಯರಿಗೆ ಹೃದಯಾಂತರಾಳದ ವಂದನೆ ಸಲ್ಲಿಸುತ್ತಿದ್ದೇನೆ. ಜೊತೆಗೆ ಮೂರು ಹೊಸ ಮುಖಗಳನ್ನು ಪರಿಚಯಿಸಿದ್ದು, ಹೊಸತನದ ಜೊತೆಗೆ ಸುಧಾರಣೆಯನ್ನು ತರಬೇಕೆನ್ನುವುದು ನನ್ನ ಆಡಳಿತದ ಆಶಯ.

ಕಳೆದ 12 ವರ್ಷಗಳ ಪ್ರಗತಿಯನ್ನು ಅವಲೋಕಿಸಿದರೆ ಸಹಕಾರ ಸಂಘ ಗಮನಾರ್ಹ ಸಾಧನೆಯನ್ನು ಸಾಧಿಸುವಲ್ಲಿ ಸಫಲರಾಗಿದ್ದೇವೆ. ಸಂಘದ 2014ರಲ್ಲಿ ರೂ. 11.83 ಕೋಟಿ ಇದ್ದ ಠೇವಣಿ, ಈಗ ರೂ. 125 ಕೋಟಿ ಠೇವಣಿ ಇರುತ್ತದೆ. 2014ರಲ್ಲಿ ಸಾಲ ರೂ. 10.18 ಕೋಟಿ ಹೊರಬಾಕಿ ಸಾಲ ಇದ್ದು ಈಗ ಅಂದರೆ 2025ರಲ್ಲಿ ಸದ್ರಿ ಹೊರಬಾಕಿ ಸಾಲವು ರೂ. 100 ಕೋಟಿಗೆ ಏರಿಸಲಾಗಿದೆ. 2014ರಲ್ಲಿ ಸಂಘದಲ್ಲಿ ಒಟ್ಟು 13 ಖಾಯಂ ಸಿಬ್ಬಂದಿಗಳು ಇದ್ದು 2025ರಲ್ಲಿ 46 ಜನ ಸಿಬ್ಬಂದಿ ಬಲ ಇರುತ್ತದೆ. ಸಿಬ್ಬಂದಿಗಳಿಗೆ 2014ರಲ್ಲಿ ಇದ್ದ ವೇತನಕ್ಕಿಂತ 3 ಪಟ್ಟು ಅಧಿಕಗೊಳಿಸಿದ್ದು ಉತ್ತಮ ವೇತನವನ್ನು ನೀಡುತ್ತಿದ್ದೇವೆ. 2014ರಲ್ಲಿ ಸಂಘದ ಒಟ್ಟು 7 ಶಾಖೆಗಳು ಮಾತ್ರ ಇದ್ದು, ಈಗ 16 ಶಾಖೆಗಳು ಕಾರ್ಯಚರಿಸುತ್ತಿದೆ. ಹಾಗೂ ವರದಿ ವರ್ಷದಲ್ಲಿ ಹೊಸ ಎರಡು ಶಾಖೆಗಳು ಪ್ರಾರಂಭಗೊಳ್ಳಲಿದೆ. ಮಾಣಿ ಶಾಖೆಗೆ ಸುಸಜ್ಜಿತ ಹೊಸ ಕಟ್ಟಡ, ಬಿ.ಸಿ. ರೋಡ್ ಹಾಗೂ ವಿಟ್ಲ ಶಾಖೆಗೆ ಸ್ವಂತ ಕಟ್ಟಡ ಖರೀದಿಗೊಳಿಸಿ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯಾಚರಿಸುತ್ತಿದೆ. ಬೆಳ್ಳಾರೆಯಲ್ಲಿ 20 ಸೆಂಟ್ಸ್ ಜಮೀನು ಖರೀದಿಸಲಾಗಿದೆ. ಮುಂದಿನ ದಿನಗಳಲ್ಲಿ ಸದ್ರಿ ಜಮೀನಿನಲ್ಲಿ ಕಟ್ಟಡ ರಚನೆ ಮಾಡಿ ಶಾಖೆಯನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು. ಎಲ್ಲಾ ಹೊಸ ಶಾಖೆಗಳಿಗೆ ಹವಾನಿಯಂತ್ರಕ ಅಳವಡಿಸಲಾಗಿದೆ. ಲೆಕ್ಕಪತ್ರದ ನಿರ್ವಹಣೆಗೆ ಸಂಪೂರ್ಣ ಗಣಕೀಕೃತ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಸದಸ್ಯರ ವ್ಯವಹಾರದ ಬಗ್ಗೆ ಎಸ್.ಎಂ.ಎಸ್. ಸೌಲಭ್ಯ, ನೆಫ್ಟ್, ಆರ್.ಟಿ.ಜಿ.ಎಸ್. ವ್ಯವಸ್ಥೆ ಇದ್ದು, ಮುಂದಿನ ದಿನಗಳಲ್ಲಿ ಮೊಬೈಲ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಕುಂಬಾರಿಕೆ ಉತ್ಪನ್ನಗಳ ಮಾರಾಟಕ್ಕೆ ಮೊಬೈಲ್ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.

ಸಹಕಾರ ಸಂಘದಲ್ಲಿ ಇನ್ನಷ್ಟು ಅಭಿವೃದ್ಧಿಯನ್ನು ಸಾಧಿಸಬೇಕೆನ್ನುವ ಹಂಬಲದಿಂದ ಮತ್ತೊಮ್ಮೆ ತಮ್ಮೆಲ್ಲರ ಆಶೀರ್ವಾದದಿಂದ ಅಧ್ಯಕ್ಷನಾಗಿ ಮುಂದುವರಿಯುತ್ತಿದ್ದೇನೆ. ತಮ್ಮೆಲ್ಲರ ಪೂರ್ಣ ಸಹಕಾರ, ಮಾರ್ಗದರ್ಶನದೊಂದಿಗೆ ಸಹಕಾರ ಸಂಘವನ್ನು ಎತ್ತರಕ್ಕೆ ಕೊಂಡೊಯ್ಯುವ ಸಹಕಾರ ಸಂಘದ ಅಭಿವೃದ್ಧಿಗೆ ನಿಮ್ಮೆಲ್ಲರ ಪ್ರೋತ್ಸಾಹ ಸದಾ ಇರಲಿ ಎಂಬ ಆಶಯದೊಂದಿಗೆ ಎಲ್ಲರಿಗೂ ಮನದಾಳದ ವಂದನೆಗಳು.

ಇತೀ ತಮ್ಮವ,



**ಭಾಸ್ಕರ ಎಂ. ಪೆರುವಾಯಿ,** ಬಿ.ಎ.(ಲಾ).ಎಲ್.ಎಲ್.ಬಿ.

ಅಧ್ಯಕ್ಷರು

## ದಿನಾಂಕ 11–07–2024ರಂದು ನಡೆದ ಮಡಂತ್ಯಾರು ಶಾಖೆಯ ಉದ್ಘಾಟನಾ ಸಮಾರಂಭ










## ದಿನಾಂಕ 24–11–2024ರಂದು ನಡೆದ ಮಾಡೂರು ಶಾಖೆಯ ಉದ್ಘಾಟನಾ ಸಮಾರಂಭ









# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

**ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು 574201**

# ವಾರ್ಷಿಕ ಮಹಾಸಭೆಯ ಆಮಂತ್ರಣ

ಸನ್ಮಾನ್ಯ ಸದಸ್ಯರೇ,

ಈ ಸಂಘದ 2024-25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ **24-08-2025ನೇ ಆದಿತ್ಯವಾರ ಪೂರ್ವಾಹ್ನ ಗಂಟೆ 10.30**ಕ್ಕೆ ಸರಿಯಾಗಿ **ಪುತ್ತೂರು ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸಭಾಭವನದಲ್ಲಿ** ಜರಗಿಸುವುದಾಗಿ ತೀರ್ಮಾನಿಸಲಾಗಿದೆ. ಸಂಘದ ಸದಸ್ಯರು ಸಭೆಯಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ನೀಡಿ ಸಭಾ ಕಲಾಪಗಳನ್ನು ನಡೆಸಿಕೊಡಬೇಕಾಗಿ ವಿನಂತಿಸುತ್ತೇವೆ.

[ಆಡಳಿತ ಮಂಡಳಿ ಆದೇಶದ ಮೇರೆಗೆ]

ಸ್ಥಳ : ಪುತ್ತೂರು
ದಿನಾಂಕ : 19-07-2025

**ಎಸ್. ಜನಾರ್ದನ ಮೂಲ್ಯ**, B.Sc., HDCM
**ಮುಖ್ಯ ಕಾರ್ಯನಿರ್ವಹಣಾಧಿಕಾರಿ**

## ಕಾರ್ಯಕ್ರಮ

1. ದಿನಾಂಕ 01–09–2024ರಂದು ನಡೆದ ಮಹಾಸಭೆಯ ನಿರ್ಣಯ ಓದಿ ದಾಖಲಿಸುವುದು. (ಪುಟ ಸಂಖ್ಯೆ 14ರಿಂದ 15)
2. 2024–25ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಅಂಗೀಕರಿಸುವ ಬಗ್ಗೆ. (ಪುಟ ಸಂಖ್ಯೆ 2ರಿಂದ 6)
3. 2024–25ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರ ಹಾಗೂ ಆಡಿಟ್ ವರದಿಗಳ ಅಂಗೀಕಾರ ಹಾಗೂ ಆಡಿಟ್ ವರದಿಯಲ್ಲಿ ದಾಖಲಿಸಿದ ನ್ಯೂನತೆಗಳಿಗೆ ಸಲ್ಲಿಸಿದ ಸಮಜಾಯಿಷಿಕೆ ಅನುಮೋದನೆ ಬಗ್ಗೆ. (ಪುಟ ಸಂಖ್ಯೆ 9ರಿಂದ 12)
4. 2024–25ನೇ ಸಾಲಿನ ಅಂದಾಜು ಆಯ ವ್ಯಯಕ್ಕಿಂತ ಹೆಚ್ಚಾದ ಖರ್ಚುಗಳ ಅಂಗೀಕಾರ. (ಪುಟ ಸಂಖ್ಯೆ 7)
5. 2025–26ನೇ ಸಾಲಿನ ವಾರ್ಷಿಕ ಅಂದಾಜು ಮುಂಗಡ ಪತ್ರ ಅನುಮೋದನೆ. (ಪುಟ ಸಂಖ್ಯೆ 8ರಿಂದ 9)
6. 2025–26ನೇ ಸಾಲಿನ ಕಾರ್ಯಯೋಜನೆಗಳ ಅಂಗೀಕಾರ. (ಪುಟ ಸಂಖ್ಯೆ 6)
7. 2025–26ನೇ ಸಾಲಿಗೆ ಪಾಲು ಬಂಡವಾಳದ ಮಿತಿ ನಿಗದಿಗೊಳಿಸುವ ಬಗ್ಗೆ.
8. 2024–25ನೇ ಸಾಲಿನಲ್ಲಿ ಗಳಿಸಿದ ನಿವ್ವಳ ಲಾಭ ರೂ. 2,64,94,562.23ನ್ನು ಸಹಕಾರ ಸಂಘದ ಉಪನಿಬಂಧನೆ ನಂ 81ಕ್ಕೆ ಅನುಸಾರವಾಗಿ ವಿಂಗಡಿಸುವ ಬಗ್ಗೆ. (ಪುಟ ಸಂಖ್ಯೆ 13)
9. ಸಹಕಾರ ಸಂಘದ ಉಪ ನಿಬಂಧನೆಗೆ ಸೂಚಿಸಲಾಗಿರುವ ತಿದ್ದುಪಡಿಯನ್ನು ಅನುಮೋದಿಸುವ ಬಗ್ಗೆ.
10. ಸದಸ್ಯರುಗಳನ್ನು ಸೇರಿಸಿಕೊಂಡ ಮತ್ತು ತೆಗೆದು ಹಾಕಿದ ಬಗ್ಗೆ ಟಿಪ್ಪಣಿ. (ಪುಟ ಸಂಖ್ಯೆ 2)
11. 2025–26ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ ಆಯ್ಕೆ ಮಾಡುವ ಬಗ್ಗೆ ಹಾಗೂ ಅವರಿಗೆ ಪಾವತಿಸತಕ್ಕ ಸಂಭಾವನೆಯನ್ನು ನಿಗದಿಗೊಳಿಸುವ ಬಗ್ಗೆ.
12. ಸಂಘದ ನಿರ್ದೇಶಕ ಮಂಡಳಿ ಸದಸ್ಯರಿಗೆ ಪಾವತಿಸಿದ ಪ್ರಯಾಣ ಭತ್ತೆ, ಸಭಾ ಭತ್ತೆ ಮತ್ತು ದಿನ ಭತ್ತೆಗಳ ಅನುಮೋದನೆ ಬಗ್ಗೆ.
13. ಸಹಕಾರ ಸಂಘದ ಉಪನಿಬಂಧನೆಗೆ ಅನುಸಾರವಾಗಿ ಹೊಸ ನಿಧಿಗಳ ಸೃಜನೆ ಬಗ್ಗೆ.
14. ಸಹಕಾರ ಸಂಘದ ಉಪನಿಬಂಧನೆ ಅನುಸಾರವಾಗಿ ವಿವಿಧ ರೀತಿಯ ಸಾಲಗಳ ಗರಿಷ್ಠ ಮಿತಿಯನ್ನು ಪರಿಷ್ಕರಿಸುವ ಬಗ್ಗೆ.
15. ಸಭಾಧ್ಯಕ್ಷರ ಅನುಮತಿ ಮೇರೆಗೆ ಬರುವ ಇತರ ವಿಷಯಗಳು.

**ವಿ. ಸೂ.**

1. ಸದಸ್ಯರು ಬರುವಾಗ ಈ ಸೂಚನಾ ಪತ್ರವನ್ನು ತರಬೇಕಾಗಿ ವಿನಂತಿ.
2. ಮಹಾಸಭೆಯಲ್ಲಿ ಮಂಡಿಸಲಾಗುವ ಯಾವುದೇ ವಿಷಯದ ಬಗ್ಗೆ ತಾರೀಕು 16–08–2025ರ ಮೊದಲು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಬರಹ ಮೂಲಕ ಸಲ್ಲಿಸುವುದು.

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು 574201

## 2024-25ನೇ ಸಾಲಿನ ಆಡಳಿತ ಮಂಡಳಿಯ ವರದಿ

ಸನ್ಮಾನ್ಯ ಸದಸ್ಯರೇ,

ಸುಧೀರ್ಘ ಇತಿಹಾಸ ಹೊಂದಿರುವ ನಮ್ಮ ಸಹಕಾರ ಸಂಘದ 67 ನೇ ವಾರ್ಷಿಕ ಮಹಾಸಭೆಗೆ ತಮ್ಮೆಲ್ಲರನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತಾ 2024-25 ನೇ ಸಾಲಿನ ವಾರ್ಷಿಕ ವರದಿಯನ್ನು ತಮ್ಮ ಮುಂದಿಡಲು ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಸಂತೋಷ ಪಡುತ್ತೇವೆ.

ಗ್ರಾಮೀಣ ಕುಂಬಾರಿಕೆ ಹಾಗೂ ಕುಶಲ ಕರ್ಮಿಗಳ ಅಭಿವೃದ್ಧಿಗಾಗಿಯೇ ಸ್ಥಾಪಿತವಾದ ನಮ್ಮ ಸಹಕಾರ ಸಂಘ ಈಗ ಎಲ್ಲಾ ವರ್ಗದ ಸದಸ್ಯರಿಗೂ ತನ್ನ ಸೇವೆಯನ್ನು ನೀಡುತ್ತಾ ಬಂದಿದೆ. ಕುಂಬಾರ ಸಮಾಜದ ಹಲವಾರು ಸಹಕಾರಿ ಧುರೀಣರು ತಮ್ಮ ನಿಸ್ವಾರ್ಥ, ವಿಶಿಷ್ಟ ಹಾಗೂ ಶ್ರದ್ಧಾಪೂರ್ವಕ ಸೇವೆಯನ್ನು ಸಲ್ಲಿಸಿದುದರ ಫಲವಾಗಿ ಸಹಕಾರ ಸಂಘವು ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಿ ಜನ ಮಾನಸದಲ್ಲಿ ವಿಶಿಷ್ಟ ಪ್ರೀತಿ, ವಿಶ್ವಾಸವನ್ನು ಗಳಿಸಲು ಸಾಧ್ಯವಾಗಿದೆ. ಹಿರಿಯ ಸಹಕಾರಿ ಬಂಧುಗಳ ಸಹಕಾರ, ಸದಸ್ಯರ ಗ್ರಾಹಕ ಬಂಧುಗಳ ಪ್ರೀತಿ ವಿಶ್ವಾಸವೇ ನಮಗೆ ಶ್ರೀ ರಕ್ಷೆ.

**ಸದಸ್ಯತ್ವ ಮತ್ತು ಪಾಲು ಬಂಡವಾಳ :** ಒಂದು ಸಹಕಾರ ಸಂಘದ ತಳಪಾಯವೇ ಸದಸ್ಯರು. ಸಂಘದಲ್ಲಿ ಸದಸ್ಯರ ಸಂಖ್ಯೆ ಹೆಚ್ಚಾದಂತೆ ಸಂಘವು ಬಲಗೊಳ್ಳುತ್ತದೆ. ಸಂಘವು ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು ಜಿಲ್ಲಾ ಕಾರ್ಯವ್ಯಾಪ್ತಿಯನ್ನು ಹೊಂದಿದ್ದು, ದಿನಾಂಕ 31-03-2025 ರ ಅಂತ್ಯಕ್ಕೆ ಒಟ್ಟು 6031 ಎ ತರಗತಿ ಹಾಗೂ 33778 ಡಿ ತರಗತಿ ಸದಸ್ಯರಿರುತ್ತಾರೆ.

| ವಿವರ | ಎ ತರಗತಿ | ಮೊಬಲಗು | ಡಿ ತರಗತಿ | ಮೊಬಲಗು |
|---|---|---|---|---|
| ವರ್ಷಾರಂಭದಲ್ಲಿದ್ದ ಸದಸ್ಯರು | 5329 | 33488462.00 | 31547 | 2286375.00 |
| ವರ್ಷದಲ್ಲಿ ಸೇರಿದ ಸದಸ್ಯರು | 721 | 1884140.00 | 2426 | 242600.00 |
| ವರ್ಷದಲ್ಲಿ ಸದಸ್ಯತನ ಹಿಂದೆ ಪಡೆದವರು | 19 | 4304600.00 | 195 | 5000.00 |
| ವರ್ಷಾಖೈರಿಗೆ ಇರುವ ಸದಸ್ಯರು | 6031 | 31068002.00 | 33778 | 2523975.00 |

ವರ್ಷಾಂತ್ಯಕ್ಕೆ ಸರಕಾರದ ಪಾಲು ಬಂಡವಾಳ ರೂ. 100,000.00 ಇರುತ್ತದೆ. ಸಂಘದ ಬೆಳವಣಿಗೆಯಲ್ಲಿ ವಿಶ್ವಾಸವನ್ನಿರಿಸಿ ಪಾಲು ಬಂಡವಾಳ ತೊಡಗಿಸಿದ ಎಲ್ಲಾ ಸದಸ್ಯರಿಗೆ ಪ್ರೀತಿಯ ಅಭಿನಂದನೆಯನ್ನು ಸಲ್ಲಿಸುತ್ತೇವೆ.

**ನಿಧಿಗಳು :** ಸಂಘದಲ್ಲಿ ಸಂಚಯಿಸಿದ ಕ್ಷೇಮ ನಿಧಿ ರೂ. 3,60,14,069.92 ಹಾಗೂ ಇತರ ನಿಧಿಗಳು ರೂ. 3,24,41,283.92 ಇರುತ್ತದೆ.

**ಠೇವಣಾತಿ :** ಸಹಕಾರ ಸಂಘದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಕಷ್ಟು ಸಂಪನ್ಮೂಲ ಸಂಗ್ರಹಿಸುವ ಅಗತ್ಯವಿದ್ದು, ವಿವಿಧ ಆಕರ್ಷಕ ಬಡ್ಡಿದರದ ಠೇವಣಾತಿಗಳ ಮುಖಾಂತರ ಸಂಗ್ರಹಿಸಲಾಗುತ್ತಿದೆ. ತಾ. 31-03-2025 ರಲ್ಲಿ ಒಟ್ಟು ಠೇವಣಿಯ ಮೊತ್ತ ರೂ. 1,16,71,97,333.07 ಇದ್ದು ವರದಿ ಸಾಲಿನಲ್ಲಿ ರೂ, 23,86,78,828.04 ಹೆಚ್ಚುವರಿ ಠೇವಣಿ ಸಂಗ್ರಹಿಸಿ 25.71 ಶೇಕಡಾ ಪ್ರಗತಿ ಸಾಧಿಸಲಾಗಿದೆ.

| ಠೇವಣಾತಿಗಳು | 31-03-2023 | 31-03-2024 | 31-03-2025 |
|---|---|---|---|
| ಉಳಿತಾಯ ಠೇವಣಿ | 71858838.83 | 65074458.38 | 70374248.72 |
| ನಿರಖು ಠೇವಣಿ | 548611077.00 | 712030141.00 | 937781296.00 |
| ನಿತ್ಯನಿಧಿ ಠೇವಣಿ | 95502547.00 | 106530571.00 | 108763336.00 |
| ಕಡ್ಡಾಯ ಠೇವಣಿ | 17863293.00 | 20875899.00 | 23459936.00 |
| ಆವರ್ತ ನಿಧಿ ಠೇವಣಿ | 1564098.00 | 2532328.00 | 2419518.00 |
| ಸಿಬ್ಬಂದಿ ಭದ್ರತಾ ಠೇವಣಿ | 13976628.25 | 16769765.25 | 19567435.25 |
| ಕುಂಭ ಲಕ್ಷ್ಮೀ ನಗದು ಪತ್ರ | 4532836.00 | 4392836.00 | 4392836.00 |
| ಚಾಲ್ತಿ ಖಾತೆ ಠೇವಣಿ | 21559.50 | 18877.40 | 145098.10 |
| ಸಿಬ್ಬಂದಿ ಭವಿಷ್ಯ ನಿಧಿ ಠೇವಣಿ | 354319.92 | 0.00 | 0.00 |
| ಸ್ಥಗಿತ ಖಾತೆ | 293629.00 | 293629.00 | 293629.00 |
| **ಜುಮ್ಲಾ** | **754578826.50** | **928518505.03** | **1167197333.07** |

**ಪಡೆದ ಸಾಲಗಳು :** ವರದಿ ಸಾಲಿನಲ್ಲಿ ಸರಕಾರದಿಂದ ಯಾ ಇತರ ಯಾವುದೇ ಮೂಲಗಳಿಂದ ಸಾಲ ಪಡೆದಿಲ್ಲ.

**ಸದಸ್ಯರಿಗೆ ವಿತರಿಸಿದ ಸಾಲ :** ಸದಸ್ಯರ ಹಾಗೂ ಕುಶಲ ಕರ್ಮಿಗಳ ಅವಶ್ಯಕತೆಗಳಿಗನುಗುಣವಾಗಿ ಸಹಕಾರ ಸಂಘದಿಂದ ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ವಿವಿಧ ಉದ್ದೇಶಗಳಿಗಾಗಿ ನೀಡಲಾಗುತ್ತಿದೆ. ವರದಿ ಸಾಲಿನಲ್ಲಿ ವಿತರಿಸಿದ ಹಾಗೂ ಹೊರ ಬಾಕಿ ಸಾಲದ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | ವಿತರಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ |
|---|---|---|---|
| 1 | ಜಾಮೀನು ಸಾಲ | 6597000.00 | 9891787.40 |
| 2 | ಠೇವಣಿ ಆಧಾರದ ಸಾಲ | 123670652.00 | 36657969.00 |
| 3 | ಚಿನ್ನಾಭರಣ ಈಡಿನ ಸಾಲ | 518881141.00 | 277346491.00 |
| 4 | ಮಧ್ಯಮಾವಧಿ ಸಾಲ | 22864050.00 | 35185933.40 |
| 5 | ಧೀರ್ಘಾವಧಿ ಸಾಲ | 207152500.00 | 416846566.00 |
| 6 | ಕ್ಯಾಷ್ ಕ್ರೆಡಿಟ್ ಸಾಲ | 323573563.00 | 143679762.60 |
| 7 | ವಾಹನ ಅಡಮಾನ ಸಾಲ | 10230469.00 | 25630743.00 |
| 8 | ಸಿಬ್ಬಂದಿ ಸಾಲ | 2500000.00 | 2989887.00 |
| 9 | ಸ್ವ ಸಹಾಯ ಸಂಘಗಳ ಸಾಲ | 650000.00 | 797612.00 |
| 10 | ಸದಸ್ಯರ ಮಕ್ಕಳ ವಿದ್ಯಾಭ್ಯಾಸ ಸಾಲ | 0.00 | 118151.00 |
| | **ಜುಮ್ಲಾ** | **1216119375.00** | **949144902.40** |

ವರದಿ ಸಾಲಿನಲ್ಲಿ ರೂ. 1,21,61,19,375.00 ಸಾಲ ವಿತರಿಸಿ ರೂ. 1,02,18,93,563.00 ಸಾಲ ವಸೂಲಿ ಬಂದಿರುತ್ತದೆ. ವರ್ಷಾಂತ್ಯಕ್ಕೆ ರೂ. 94,91,44,902.40 ಹೊರಬಾಕಿ ಸಾಲ ಇದ್ದು, ಈ ಪೈಕಿ ರೂ. 4,55,01,966.00 ಸುಸ್ತಿಯಾಗಿರುತ್ತದೆ. ಸುಸ್ತಿ ಸಾಲದ ಮೊಬಲಗು ಹೊರಬಾಕಿ ಸಾಲದ 4.79 ಶೇಕಡಾ ಇರುತ್ತದೆ.

**ವಿನಿಯೋಗ :** ಕ್ಷೇಮ ನಿಧಿಯ ಬಾಬ್ತು ರೂ. 3,53,77,083.10 ಹಾಗೂ ದ್ರವ್ಯಾಸ್ತಿಯ ಬಾಬ್ತು ವಿವಿಧ ಬ್ಯಾಂಕುಗಳಲ್ಲಿ ರೂ. 31,73,09,510.00 ಹಾಗೂ ಪಾಲುಗಳಲ್ಲಿ ರೂ. 89,000.00 ವಿನಿಯೋಗಿಸಲಾಗಿದೆ. ನಿರಖು ಠೇವಣಿ ವಿನಿಯೋಗಗಳಿಂದ ಹಾಗೂ ಪಾಲುಗಳಲ್ಲಿ ವಿನಿಯೋಗದಿಂದ ರೂ 3,47,39,556.00 ಬಡ್ಡಿ ಆದಾಯ ಬಂದಿರುತ್ತದೆ.

**ಸ್ಥಿರಾಸ್ತಿಗಳು :** ಸಂಘದಲ್ಲಿ ಒಟ್ಟು ರೂ. 3,29,36,540.93 ಮೌಲ್ಯದ ಸ್ಥಿರಾಸ್ತಿ ಇದ್ದು ಇವುಗಳಿಗೆ ರೂ. 24,14,783.00 ಸವಕಳಿಗೆ ಕಾದಿರಿಸಲಾಗಿದೆ. ಸ್ಥಿರಾಸ್ತಿಗಳ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | ಮೊಬಲಗು |
|---|---|---|
| 1 | ಪುತ್ತೂರು ನಗರ ನಿವೇಶನ | 5000.00 |
| 2 | ಕೌಡಿಚಾರು ಜಮೀನು | 1634.55 |
| 3 | ಕೈಗಾರಿಕೆ ಇಲಾಖೆ ಕಟ್ಟಡ (ಕೌಡಿಚಾರು) | 100000.00 |
| 4 | ಕೇಂದ್ರ ಕಛೇರಿ ಕಟ್ಟಡ (ಪುತ್ತೂರು) | 2812046.80 |
| 5 | ಕೌಡಿಚಾರು ಶಾಖೆ ಮಾರಾಟ ಮಳಿಗೆ ಕಟ್ಟಡ | 1364799.50 |
| 6 | ಅರ್ ಐ ಎಸ್ ಸಿ ಅನುದಾನದ ಕಟ್ಟಡ (ಕೌಡಿಚಾರು) | 105514.00 |
| 7 | ಕೊಳವೆ ಬಾವಿ (ಕೌಡಿಚಾರು) | 48500.00 |
| 8 | ಮಾಣಿ ಶಾಖೆಯ ಕಟ್ಟಡ | 13481656.08 |
| 9 | ಕೊಳವೆ ಬಾವಿ (ಮಾಣಿ) | 142005.00 |
| 10 | ವಿಟ್ಲ ಶಾಖಾ ಕಛೇರಿ ಕಟ್ಟಡ ಕೋಣೆ ಖರೀದಿ ಮೌಲ್ಯ | 4725079.00 |
| 11 | ಬೆಳ್ಳಾರೆ ಶಾಖೆಯ ಜಮೀನು | 6719556.00 |
| 12 | ಬಿಸಿರೋಡು ಶಾಖೆಯ ಮಾರಾಟ ಮಳಿಗೆ ಕೋಣೆ | 1615750.00 |
| 13 | ಮಾಣಿ ಶಾಖೆಯ ಜಮೀನಿನ ಮೌಲ್ಯ | 1815000.00 |

**ಚರಾಸ್ತಿಗಳು :** ವರದಿ ವರ್ಷದಲ್ಲಿ ರೂ. 22,68,477.44 ಮೌಲ್ಯದ ಪೀಠೋಪಕರಣ, ರೂ. 13,54,735.80 ಮೌಲ್ಯದ ಗಣಕಯಂತ್ರ, ರೂ. 48,000.00 ಮೌಲ್ಯದ ಯಂತ್ರೋಪಕರಣ (ಪಗ್ ಮಿಲ್) ಖರೀದಿಸಲಾಗಿದ್ದು ವರ್ಷಾಂತ್ಯಕ್ಕೆ ರೂ. 92,63,997.56 ಮೌಲ್ಯದ ಪೀಠೋಪಕರಣ, ರೂ. 55,83,785.64 ಮೌಲ್ಯದ ಗಣಕಯಂತ್ರ, ರೂ. 11,02,419.42 ಮೌಲ್ಯದ ವಾಹನ, ರೂ. 3,00,637.00 ಮೌಲ್ಯದ ಯಂತ್ರೋಪಕರಣ, ರೂ 4,01,779.91 ಮೌಲ್ಯದ ಹವಾನಿಯಂತ್ರಕ ಇರುತ್ತದೆ. ಪೀಠೋಪಕರಣಗಳ ಮೇಲೆ ರೂ. 9,66,578.00, ಗಣಕಯಂತ್ರದ ಮೇಲೆ ರೂ. 12,77,956.00 ಮತ್ತು ಯಂತ್ರೋಪಕರಣದ ಮೇಲೆ ರೂ. 52,715.00 ಮತ್ತು ವಾಹನದ ಮೇಲೆ ರೂ. 1,65,363.00 ಸವಕಳಿಗೆ ಕಾದಿರಿಸಲಾಗಿದೆ.

**ಶಾಖಾವಾರು ವ್ಯವಹಾರ :** ಶಾಖಾವಾರು ವ್ಯವಹಾರದ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಶಾಖೆಯ ವಿವರ | ವ್ಯವಹಾರ [ಲಕ್ಷಗಳಲ್ಲಿ] | ಠೇವಣಿಗಳು [ಲಕ್ಷಗಳಲ್ಲಿ] | ಹೊರಬಾಕಿಸಾಲ [ಲಕ್ಷಗಳಲ್ಲಿ] |
|---|---|---|---|---|
| 1 | ಪುತ್ತೂರು | 30862.42 | 4349.89 | 4425.39 |
| 2 | ಕೌಡಿಚಾರು | 1904.06 | 334.42 | 283.09 |
| 3 | ಗುರುವಾಯನಕೆರೆ | 3158.00 | 638.40 | 677.27 |
| 4 | ಬೆಳ್ಳಾರೆ | 2371.20 | 566.71 | 468.40 |
| 5 | ಕುಡ್ತಮುಗೇರು | 946.30 | 226.84 | 152.64 |
| 6 | ಮಾಣಿ | 5073.84 | 1055.15 | 622.79 |
| 7 | ವಿಟ್ಲ | 2664.09 | 508.09 | 418.30 |
| 8 | ಉಪ್ಪಿನಂಗಡಿ | 2025.17 | 518.63 | 495.33 |
| 9 | ಬಿ ಸಿ ರೋಡ್ | 3844.28 | 1286.34 | 448.38 |
| 10 | ಮೆಲ್ಕಾರು | 1950.99 | 549.05 | 346.36 |
| 11 | ಬೆಳ್ತಂಗಡಿ | 1905.31 | 408.19 | 332.60 |
| 12 | ಸಿದ್ದಕಟ್ಟೆ | 1641.63 | 286.92 | 282.48 |
| 13 | ಮುಡಿಪು | 1862.24 | 322.30 | 280.51 |
| 14 | ಫರಂಗಿಪೇಟೆ | 1128.83 | 183.73 | 93.39 |
| 15 | ಮಡಂತ್ಯಾರು | 932.33 | 269.05 | 149.26 |
| 16 | ಮಾಡೂರು | 383.32 | 168.27 | 15.25 |
| | **ಒಟ್ಟು** | **62654.01** | **11671.98** | **9491.44** |

ಸಂಘವು ಕೇಂದ್ರ ಕಛೇರಿ ಸೇರಿ 16 ಶಾಖೆಗಳನ್ನು ಹೊಂದಿದ್ದು, ರೂ. 626.54 ಕೋಟಿ ವ್ಯವಹಾರ ದಾಖಲಿಸಿ ಪ್ರಗತಿ ಪಥದಲ್ಲಿ ಸಾಗುತ್ತಿದೆ. ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸಲಾಗಿದೆ. ಗ್ರಾಹಕರ ಅನುಕೂಲಕ್ಕಾಗಿ ಎಲ್ಲಾ ಶಾಖೆಗಳಲ್ಲಿ ವ್ಯವಹಾರದ ಮಾಹಿತಿ ತಿಳಿಯಲು ಎಸ್. ಎಂ. ಎಸ್. ವ್ಯವಸ್ಥೆ ಇರುತ್ತದೆ.

**ಖರೀದಿ ಮತ್ತು ಮಾರಾಟ :** ವರದಿ ಸಾಲಿನಲ್ಲಿ ರೂ. 17,58,354.00 ಮೌಲ್ಯದ ಕುಂಬಾರಿಕಾ ಉತ್ಪನ್ನ ಖರೀದಿ ಮಾಡಿ ರೂ. 30,13,441.00 ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡಲಾಗಿದೆ. ವರ್ಷಾಂತ್ಯಕ್ಕೆ ರೂ. 18,27,119.46 ಮೌಲ್ಯದ ಸರಕು ದಾಸ್ತಾನು ಇರುತ್ತದೆ. ವ್ಯಾಪಾರದಿಂದ ರೂ. 15,09,706.57 ಲಾಭ ಗಳಿಸಲಾಗಿದೆ.

ಸದಸ್ಯ ಕುಂಬಾರ ಕುಶಲ ಕರ್ಮಿಗಳು ತಮ್ಮ ಕುಂಬಾರಿಕಾ ಉತ್ಪನ್ನಗಳನ್ನು ಸಹಕಾರ ಸಂಘಕ್ಕೇ ಮಾರಾಟ ಮಾಡಿ ಇನ್ನೂ ಅಧಿಕ ಲಾಭಗಳಿಸಲು ಸಹಕರಿಸುವಂತೆ ವಿನಂತಿಸುತ್ತೇವೆ.

**ಲಾಭ ನಷ್ಟ :** ವರದಿ ಸಾಲಿನಲ್ಲಿ ವರ್ಷಾಖೈರಿಗೆ ರೂ. 2,64,94,562.23 ನಿವ್ವಳ ಲಾಭ ಗಳಿಸಲಾಗಿದೆ.

**ಸದಸ್ಯರ ಕ್ಷೇಮಾಭಿವೃದ್ದಿ :** ಸದಸ್ಯರ ಅನುಕೂಲಕ್ಕಾಗಿ ಕೆ ಎಂ ಸಿ ಆಸ್ಪತ್ರೆ ಮಣಿಪಾಲ ಇವರ ಆರೋಗ್ಯ ವಿಮೆ ಕಾರ್ಡನ್ನು ಸಹಕಾರ ಸಂಘದಿಂದ ಸದಸ್ಯರಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಕೇಂದ್ರ ಸರಕಾರದ ಕರಕುಶಲ ಮಂತ್ರಾಲಯದ ಸಹಯೋಗದೊಂದಿಗೆ ಹಾಗೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವಾಲಯ ಕೇಂದ್ರ ಸರಕಾರ ಇವರ ಸಹಯೋಗದಲ್ಲಿ ಪಿ ಎಂ ವಿಶ್ವಕರ್ಮ ಯೋಜನೆಯ ಮಾಹಿತಿ ಶಿಬಿರವನ್ನು ಏರ್ಪಡಿಸಲಾಗಿದೆ ಮತ್ತು ಸದಸ್ಯರಿಗೆ ಗುರುತಿನ ಚೀಟಿ ವಿತರಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

**ಆಡಳಿತ :** ಸಹಕಾರ ಸಂಘದ ಆಡಳಿತ ಮಂಡಳಿಗೆ ದಿನಾಂಕ 02/02/2025ರಂದು ಚುನಾವಣೆ ನಡೆದಿದ್ದು ಸದ್ರಿ ಚುನಾವಣೆಯಲ್ಲಿ 11 ಮಂದಿ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ದಿನಾಂಕ 15/02/2025ರಂದು ನಡೆದ ನಿರ್ದೇಶಕರ ಸಮಿತಿ ಸಭೆಯಲ್ಲಿ ಶ್ರೀ ಭಾಸ್ಕರ ಎಂ ಪೆರುವಾಯಿ ಅಧ್ಯಕ್ಷರಾಗಿಯು, ಶ್ರೀ ದಾಮೋದರ ಕುಲಾಲ್‌ರವರು ಉಪಾಧ್ಯಕ್ಷರಾಗಿಯೂ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ. ವರದಿ ಸಾಲಿನಲ್ಲಿ 12 ಆಡಳಿತ ಮಂಡಳಿ ಸಭೆ ಹಾಗೂ 24 ಸಾಲದ ಸಮಿತಿ ಸಭೆ ಜರಗಿರುತ್ತದೆ. ಹಾಗೂ ದಿನಾಂಕ 01-09-2024 ರಂದು ಮಹಾಸಭೆ ಜರಗಿರುತ್ತದೆ. ಮಹಾಸಭೆಗೆ 2012 ಸದಸ್ಯರು ಹಾಜರಾಗಿರುತ್ತಾರೆ. ಸಾಲದ ಸಮಿತಿ ನಿರ್ಣಯಗಳಿಗೆ ಆಡಳಿತ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ. ಸಂಘದ ದೈನಂದಿನ ವ್ಯವಹಾರವನ್ನು ಆಡಳಿತ ಮಂಡಳಿ ಪ್ರತಿ ತಿಂಗಳು ಸಭೆ ಸೇರಿ ಪರಿಶೀಲಿಸಿ ಅಗತ್ಯದ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

**ನಮ್ಮ ಸಾಧನೆಗಳು :** ಬೆಳ್ತಂಗಡಿ ತಾಲೂಕಿನ ಮಡಂತ್ಯಾರು ಪೇಟೆಯಲ್ಲಿ ದಿನಾಂಕ 11/07/2024ರಂದು 15ನೇ ಮಡಂತ್ಯಾರು ಶಾಖೆಯನ್ನು ಪ್ರಾರಂಭಿಸಲಾಗಿದೆ. ಮಡಂತ್ಯಾರು ಚರ್ಚ್‌ನ ಧರ್ಮಗುರುಗಳಾದ ಶ್ರೀ ಫಾದರ್ ಸ್ಟ್ಯಾನಿ ಗೋವಿಯಸ್ ಹಾಗೂ ಇತರ ಗಣ್ಯರ ಉಪಸ್ಥಿತಿಯಲ್ಲಿ ಶಾಖೆಯನ್ನು ಪ್ರಾರಂಭಿಸಲಾಗಿದೆ.

ವಿಟ್ಲ ಶಾಖೆಗೆ ಸ್ವಂತ ಕಟ್ಟಡ ಕೋಣೆಯನ್ನು ಖರೀದಿಸಿ ದಿನಾಂಕ 13/09/2024ರಂದು ಸುಸಜ್ಜಿತ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

16 ನೇ ಮಾಡೂರು ಶಾಖೆಯನ್ನು ದಿನಾಂಕ 24/11/2024ರಂದು ಪ್ರಾರಂಭಿಸಲಾಗಿದೆ. ಉಳ್ಳಾಲ ಕ್ಷೇತ್ರದ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ವಿಧಾನ ಸಭಾಪತಿಗಳಾದ ಶ್ರೀ ಯು. ಟಿ. ಖಾದರ್‌ರವರು ಈ ಶಾಖೆಯ ಉದ್ಘಾಟನೆಯನ್ನು ನೆರವೇರಿಸಿಕೊಟ್ಟಿರುತ್ತಾರೆ ಹಲವು ಗಣ್ಯರ ಕೂಡುವಿಕೆಯಿಂದ ಶಾಖೆಯ ಉದ್ಘಾಟನಾ ಸಮಾರಂಭ ಸಂಪನ್ನಗೊಂಡಿರುತ್ತದೆ. ಶಾಖೆಗೆ ಉತ್ತಮ ಪ್ರೋತ್ಸಾಹ ದೊರೆತಿರುತ್ತದೆ. ಈ ಎರಡೂ ಶಾಖೆಗಳು ಉತ್ತಮವಾಗಿ ಕಾರ್ಯಾಚರಿಸುತ್ತಿದೆ.
ಎಲ್ಲಾ ಶಾಖೆಗಳಲ್ಲಿ ಕುಂಬಾರಿಕಾ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ನಮ್ಮ ಸಾಧನೆಯನ್ನು ಪರಿಗಣಿಸಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನವರು ವಿಶೇಷ ಸಾಧನಾ ಪ್ರಶಸ್ತಿ ನೀಡಿ 5 ನೇ ಬಾರಿಗೆ ಗೌರವಿಸಿರುತ್ತಾರೆ ಎಂದು ತಿಳಿಸಲು ಹರ್ಷಿಸುತ್ತೇವೆ.

**ನೌಕರ ವರ್ಗ :** ಸಹಕಾರ ಸಂಘದಲ್ಲಿ 46 ಖಾಯಂ ಸಿಬ್ಬಂದಿ ಗಳಿರುತ್ತಾರೆ. ಸಿಬ್ಬಂದಿ ವೆಚ್ಚಗಳಿಗೆ ರೂ. 1,76,74,151.00 ಹಾಗೂ ದಿನಕೂಲಿ ನೌಕರರ ಸಂಭಾವನೆಗೆ ರೂ. 1,49,731.00 ವೆಚ್ಚ ಮಾಡಲಾಗಿದೆ.

**ಲೆಕ್ಕ ಪರಿಶೋಧನೆ :** 2024-25ನೇ ಸಾಲಿನ ಲೆಕ್ಕ ಪರಿಶೊಧನೆಯನ್ನು ಶ್ರೀ ಸುಧೀರ್ ಕುಮಾರ್ ಎನ್. ಕೆ., ಸನ್ನದು ಲೆಕ್ಕಪರಿಶೋಧಕರು ಇವರು ಲೆಕ್ಕ ಪರಿಶೋಧನೆಯನ್ನು ಮಾಡಿ ವರದಿ ಸಲ್ಲಿಸಿರುತ್ತಾರೆ. ಲೆಕ್ಕ ಪರಿಶೋಧಕರು ಸೂಚಿಸಿದ ನ್ಯೂನತೆಗಳಿಗೆ ಆಡಳಿತ ಮಂಡಳಿ ಚರ್ಚಿಸಿ ಅನುಪಾಲನಾ ವರದಿ ತಯಾರಿಸಿ ಮಹಾಸಭೆಯ ಅನುಮೋದನೆಗೆ ಶಿಫಾರಸ್ಸು ಮಾಡಿದೆ. ವರದಿ ಸಾಲಿನಲ್ಲಿ ಸಂಘವನ್ನು ಎ ದರ್ಜೆಯಲ್ಲಿ ವಿಂಗಡಿಸಿರುವುದು ಸಂಘದ ಬೆಳವಣಿಗೆಯ ಬಗ್ಗೆ ಪೂರಕ ಸಾಕ್ಷ್ಯವಾಗಿದೆ.

**ಕುಂಬಾರ ಕುಶಲ ಕರ್ಮಿಗಳಿಗೆ ಮಾಹಿತಿ ಸೌಲಭ್ಯ ಹಾಗೂ ಸಲಕರಣೆ ವಿತರಣೆ :** ದಿನಾಂಕ 09/01/2025ರಂದು ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆಯ ಬಗ್ಗೆ ಮಾಹಿತಿ ಶಿಬಿರವನ್ನು ಪುತ್ತೂರು ನಗರದಲ್ಲಿ ನಡೆಸಲಾಗಿರುತ್ತದೆ. ಈ ಶಿಬಿರದಲ್ಲಿ ಹಲವಾರು ಕುಶಲ ಕರ್ಮಿಗಳು ನೊಂದಣಿ ಮಾಡಲು ಅನುಕೂಲ ಕಲ್ಪಿಸಿಕೊಡಲಾಗಿದೆ.

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ವತಿಯಿಂದ ಒಟ್ಟು 40 ಜನ ಕುಂಬಾರ ಕುಶಲ ಕರ್ಮಿಗಳಿಗೆ ಸಲಕರಣೆ ವಿತರಿಸುವ ಬಗ್ಗೆ ಸಲ್ಲಿಸಲಾದ ಅರ್ಜಿ ಪುರಸ್ಕೃತಗೊಂಡು ವರದಿ ಸಾಲಿನಲ್ಲಿ ಅವರಿಗೆ ಸಲಕರಣೆ ವಿತರಿಸಲಾಗಿದೆ.

**ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ :** ದಿನಾಂಕ 01/12/2024 ರಂದು ಸಹಕಾರ ಸಂಘದ ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ವಿತರಣೆ ಹಾಗೂ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಯ ಬಗ್ಗೆ ವಿಶೇಷ ತಜ್ಞರಿಂದ ಮಾಹಿತಿ ಕಾರ್ಯಕ್ರಮವನ್ನು ನಡೆಸಲಾಗಿರುತ್ತದೆ. ಒಟ್ಟು 142 ವಿದ್ಯಾರ್ಥಿಗಳಿಗೆ ರೂ. 4,52,000.00 ವಿದ್ಯಾರ್ಥಿವೇತನ ವಿತರಣೆ ಮಾಡಲಾಗಿದೆ.

**ಆಡಳಿತ ಮಂಡಳಿ ಚುನಾವಣೆ :** ವರದಿ ವರ್ಷದಲ್ಲಿ ಆಡಳಿತ ಮಂಡಳಿಗೆ ಚುನಾವಣೆ ನಡೆದಿದ್ದು, ಒಟ್ಟು 11 ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಆಯ್ಕೆಯಾದ ನಿರ್ದೇಶಕರ ವಿವರವನ್ನು ವರದಿ ಪುಸ್ತಕದಲ್ಲಿ ನಮೂದಿಸಲಾಗಿದೆ. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಚುನಾವಣೆ ಪ್ರಕ್ರಿಯೆ ನಡೆಸಿಕೊಟ್ಟಿರುತ್ತಾರೆ.

**ನಮ್ಮ ಇತರ ಸೇವೆಗಳು :** ಸಹಕಾರ ಸಂಘದ ಸದಸ್ಯರಿಗೆ ಎಲ್ಲಾ ರೀತಿಯ ಸೇವೆಗಳು ನಮ್ಮ ಎಲ್ಲಾ ಶಾಖೆಗಳಲ್ಲಿ ದೊರೆಯುವಂತೆ ಪ್ರಯತ್ನಿಸಲಾಗಿದೆ. ಇ ಸ್ಟಾಂಪಿಂಗ್ ಸೇವೆಯನ್ನು ಪುತ್ತೂರು ಕೇಂದ್ರ, ಬಿ.ಸಿ. ರೋಡ್, ಮತ್ತು ಬೆಳ್ತಂಗಡಿ ಶಾಖೆಗಳಲ್ಲಿ ಸ್ಥಾಪಿಸಲಾಗಿದೆ. RTGS ಮತ್ತು NEFT ಸೌಲಭ್ಯವನ್ನು ಎಲ್ಲಾ ಶಾಖೆಗಳಲ್ಲಿ ಕಲ್ಪಿಸಲಾಗಿದೆ. ಸದಸ್ಯರ ವಾಹನಗಳ ಸುರಕ್ಷತೆಗಾಗಿ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿಯ ಮುಖಾಂತರ ವಿಮಾ ಸೇವೆಯನ್ನು ನೀಡುತ್ತಿದ್ದೇವೆ. ಪಹಣಿ ಪತ್ರಿಕೆ ವಿತರಣೆಗೆ ಕೂಡ ಕ್ರಮ ಕೈಗೊಳ್ಳಲಾಗಿದೆ. ಸದಸ್ಯರಿಗೆ ಒಂದೇ ಕಡೆ ಎಲ್ಲಾ ಸೇವೆಗಳು ಲಭ್ಯವಾಗುವಂತೆ ಸೂಕ್ತ ವ್ಯವಸ್ಥೆಗಳನ್ನು ಕಲ್ಪಿಸಿಕೊಡಲಾಗುವುದು.

**2025–26ನೇ ಸಾಲಿನ ಕಾರ್ಯಯೋಜನೆಗಳು :**

1. ಕುಂಬಾರಿಕೆಯ ಕೈಗಾರಿಕೆಯ ಬಗ್ಗೆ ಕುಶಲ ಕರ್ಮಿಗಳಿಗೆ ವಿಶೇಷ ತರಬೇತಿಯನ್ನು ಆಯೋಜಿಸುವುದು.
2. ಕುಂಬಾರಿಕೆಯ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ ವಾಹನವನ್ನು ಖರೀದಿಸಿ ವಾರದ ಎಲ್ಲಾ ದಿನಗಳಲ್ಲಿ ಪ್ರಮುಖ ನಗರಗಳಲ್ಲಿ ಕುಂಬಾರಿಕೆ ಪ್ರದರ್ಶನ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡುವುದು.
3. ಸದಸ್ಯರ ಅನುಕೂಲಕ್ಕಾಗಿ ಆರೋಗ್ಯ ಶಿಬಿರವನ್ನು ಏರ್ಪಡಿಸುವುದು.
4. ಕುಂಬಾರಿಕೆ ವೃತ್ತಿ ನಿರತ ಕುಂಬಾರ ಕುಶಲ ಕರ್ಮಿಗಳಿಗೆ 9% ಬಡ್ಡಿ ದರದಲ್ಲಿ ಸಾಲ ನೀಡುವುದು.
5. ಕುಂಬಾರ ಸಮುದಾಯದ ಆಸಕ್ತರಿಗೆ ಉಚಿತ ನಿರಂತರ ತರಬೇತಿಗೆ ವ್ಯವಸ್ಥೆ ಮಾಡುವುದು.
6. ಕಲ್ಲಡ್ಕ ಮತ್ತು ಕಡಬದಲ್ಲಿ ಹೊಸ ಶಾಖೆ ಪ್ರಾರಂಭಿಸುವುದು. [ಈಗಾಗಲೇ ಸ್ಥಳ ಗುರುತಿಸಿ ಶಾಖೆ ಪ್ರಾರಂಭದ ಕೆಲಸ ಪ್ರಗತಿಯಲ್ಲಿದೆ]
7. ಕೇಂದ್ರ ಕಛೇರಿ ನವೀಕರಣಗೊಳಿಸುವುದು.

**ವಿಜ್ಞಾಪನೆ :** ಸಂಘದ ಸದಸ್ಯರು ಪಾಲು ಬಂಡವಾಳ ಹಾಗೂ ಠೇವಣಿಗಳಲ್ಲಿ ಹೆಚ್ಚಿನ ಹಣ ತೊಡಗಿಸಿ ಸಂಘದ ಹೆಚ್ಚಿನ ಅಭಿವೃದ್ಧಿಗೆ ಸಹಕಾರ ನೀಡಬೇಕಾಗಿ ವಿನಂತಿಸುತ್ತೇವೆ. ಸದಸ್ಯರ ಕ್ಷೇಮಾಭಿವೃದ್ಧಿಗೆ ಇರುವ ವಿಮಾ ಯೋಜನೆಗಳ ಪ್ರಯೋಜನವನ್ನು ಪಡೆಯಬೇಕಾಗಿ ವಿನಂತಿಸುತ್ತೇವೆ. ಕುಂಬಾರಿಕೆಯಲ್ಲಿ ಆಸಕ್ತಿ ಇರುವ ಸದಸ್ಯರಿಗೆ ಯಾ ಮಕ್ಕಳಿಗೆ ಉಚಿತವಾಗಿ ತರಬೇತಿಯನ್ನು ನೀಡಲಾಗುತ್ತಿದ್ದು ಇದರ ಪ್ರಯೋಜನವನ್ನು ಪಡೆಯಬೇಕಾಗಿ ವಿನಂತಿ. ಸದಸ್ಯರು ಪಡಕೊಂಡ ಸಾಲವನ್ನು ಕ್ಲಪ್ತ ಸಮಯಕ್ಕೆ ಪಾವತಿಸಿ ವಾಯಿದೆ ದಾಟಿದ ಸಾಲಗಳ ಪ್ರಮಾಣವನ್ನು ಕಡಿಮೆಗೊಳಿಸಲು ಸಹಕರಿಸಬೇಕಾಗಿ ವಿನಂತಿ.

**ಉಪಕಾರ ಸ್ಮರಣೆ :** ಸಂಘದ ಬೆಳವಣಿಗೆಗಾಗಿ ಸೂಕ್ತ ಸಲಹೆ ಸೂಚನೆಗಳನ್ನಿತ್ತು ಮಾರ್ಗದರ್ಶನ ನೀಡಿದ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೂ, ಸಹಕಾರ ಸಂಘಗಳ ಉಪ ನಿಬಂಧಕರಿಗೂ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರಿಗೂ ನಮ್ಮ ಗೌರವಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಕೇಂದ್ರ ಜವಳಿ ಮಂತ್ರಾಲಯದ ಸಹಾಯಕ ನಿರ್ದೇಶಕರು ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ನಮಗೆ ಪೂರಕ ಮಾರ್ಗದರ್ಶನ ನೀಡಿರುತ್ತಾರೆ ಹಾಗೂ ಇಲಾಖೆಯ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿರುತ್ತಾರೆ, ಇವರಿಗೂ ನಮ್ಮ ಧನ್ಯವಾದಗಳು. ಸಕಾಲದಲ್ಲಿ ಲೆಕ್ಕ ಪರಿಶೋಧನೆಯನ್ನು ನಡೆಸಿಕೊಟ್ಟ ಹಾಗೂ ತೆರಿಗೆ ಇಲಾಖೆಗೆ ಮಾಹಿತಿ ನೀಡಲು ಸಹಕರಿಸಿದ ಸನ್ನದು ಲೆಕ್ಕ ಪರಿಶೋಧಕರಾದ ಶ್ರೀ ಸುಧೀರ್ ಕುಮಾರ್ ಎನ್. ಕೆ.ರವರಿಗೂ ನಮ್ಮ ಧನ್ಯವಾದಗಳು. ಸಂಘದ ಕಾನೂನು ಸಲಹೆಗಾರರಾಗಿ ಸಹಕರಿಸುತ್ತಿರುವ ಎಲ್ಲಾ ಕಾನೂನು ಸಲಹೆಗಾರರಿಗೆ ನಮ್ಮ ವಂದನೆಗಳು. ಸಂಘದ ಚಿನ್ನಾಭರಣ ಮೌಲ್ಯ ಮಾಪಕರಾದ ಎಲ್ಲಾ ಸರಾಫರಿಗೂ ಹಾಗೂ ಜಮೀನು ಮೌಲ್ಯ ಮಾಪನ ಮಾಡುತ್ತಿರುವ ನಮ್ಮ ಸಹಕಾರ ಸಂಘದ ಪ್ಯಾನೆಲ್‌ನಲ್ಲಿರುವ ಎಲ್ಲಾ ಇಂಜಿನಿಯರ್‌ರವರಿಗೆ ನಮ್ಮ ಧನ್ಯವಾದಗಳು. ಬ್ಯಾಂಕಿಂಗ್ ವ್ಯವಹಾರದಲ್ಲಿ ಸಹಕಾರ ನೀಡಿರುವ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿಗೆ ನಮ್ಮ ಧನ್ಯವಾದಗಳು. ಸಹಕಾರ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಪುತ್ತೂರು ನಗರಸಭೆಯವರಿಗೆ ನಮ್ಮ ಮನದಾಳದ ವಂದನೆಗಳು.

ನಮ್ಮ ಅಚ್ಚು ಮೆಚ್ಚಿನ ಸದಸ್ಯ ಠೇವಣಿದಾರರು, ಗ್ರಾಹಕವರ್ಗ, ಕುಶಲ ಕರ್ಮಿಗಳು ಮತ್ತು ಇನ್ನಿತರ ಮಹನೀಯರ ಸಹಕಾರದಿಂದ ಸಂಘದ ವ್ಯವಹಾರವನ್ನು ಈ ಮಟ್ಟಿಗೆ ಅಭಿವೃದ್ಧಿ ಪಡಿಸಲು ಸಾಧ್ಯವಾಗಿದೆ. ಇನ್ನು ಮುಂದೆಯೂ ಈ ಸಹಕಾರ ಸಂಘದ ವ್ಯವಹಾರವನ್ನು ದ್ವಿಗುಣಗೊಳಿಸಲು ಪೂರಕವಾದ ಸಹಕಾರವನ್ನು ನೀಡುವಂತೆ ಕೃತಜ್ಞತಾಪೂರ್ವಕವಾಗಿ ವಿನಂತಿಸುತ್ತೇವೆ. ನಮ್ಮ ಸಹಕಾರ ಸಂಘದ ಎಲ್ಲಾ ಅಭಿಮಾನಿಗಳ ಸರ್ವ ಪ್ರೋತ್ಸಾಹ ಪ್ರೇರೇಪಣೆ ಹಾಗೂ ಸಹಕಾರಗಳು ನಮ್ಮ ಬೆಳವಣಿಗೆಗೆ ಸದಾ ವರದಾನವಾಗಿದೆ. ಅಂತೆಯೇ ಸಂಘದ ಅಭಿವೃದ್ಧಿಗೆ ಪರೋಕ್ಷವಾಗಿ ಸಹಕಾರ ನೀಡಿದ ನಮ್ಮ ಎಲ್ಲಾ ಶಾಖೆಯ ಸಲಹಾ ಸಮಿತಿಯ ಸದಸ್ಯರಿಗೆ ನಮ್ಮ ಪ್ರೀತಿಯ ಅಭಿನಂದನೆಗಳು.

ನಮ್ಮ ಯೋಜನೆ ಹಾಗೂ ಯೋಚನೆಗಳನ್ನು ಸಾಧಿಸುವರೆ ಆಡಳಿತದೊಂದಿಗೆ ಸಹಕರಿಸಿ ಜನಮಾನಸದಲ್ಲಿ ಪ್ರೀತಿ ವಿಶ್ವಾಸ ಗಳಿಸಲು ಜನಾನುರಾಗಿಯಂತಾಗಲು ತಮ್ಮ ಹೊಣೆಗಾರಿಕೆಯನ್ನು ಅರಿತು ಶ್ರಮಿಸಿದ ಸಹಕಾರ ಸಂಘದ ಎಲ್ಲ ಸಿಬ್ಬಂದಿ ವರ್ಗದವರಿಗೂ ವಿಶೇಷವಾಗಿ ನಿತ್ಯ ನಿಧಿ ಸಂಗ್ರಾಹಕರಿಗೂ ನಮ್ಮ ಅಭಿನಂದನೆಗಳು.

ನಮಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಸದಸ್ಯರಿಗೆ ತುಂಬು ಹೃದಯದ ಕೃತಜ್ಞತೆಗಳು.

| | |
|---|---|
| **ಶ್ರೀ ದಾಮೋದರ ಕುಲಾಲ್** | **ಶ್ರೀ ಭಾಸ್ಕರ ಎಂ ಪೆರುವಾಯಿ** |
| (ಬಿ. ಕಾಂ.) | (ಬಿ.ಎ. [ಲಾ] ಎಲ್.ಎಲ್.ಬಿ.,) |
| ಉಪಾಧ್ಯಕ್ಷರು | ಅಧ್ಯಕ್ಷರು |

ಹಾಗೂ **ಆಡಳಿತ ಮಂಡಳಿ ಸದಸ್ಯರು**

## ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

### 2024–25ನೇ ಸಾಲಿನಲ್ಲಿ ಅಂದಾಜು ಆಯ ವ್ಯಯಕ್ಕಿಂತ ಹೆಚ್ಚಾದ ಖರ್ಚುಗಳ ಅಂಗೀಕಾರ

| ಕ್ರ. ಸಂ | ವಿವರ | 2024–25ನೇ ಸಾಲಿನಲ್ಲಿ ಆದ ಖರ್ಚು | 2024–25ನೇ ಸಾಲಿನಲ್ಲಿ ಮಂಜೂರು ಮಾಡಿದ ಖರ್ಚು | ಹೆಚ್ಚಾದ ಖರ್ಚು | ಕಾರಣ |
|---|---|---|---|---|---|
| 1 | ಠೇವಣಿ ಮೇಲಿನ ಬಡ್ಡಿ | 80876255.00 | 70000000.00 | 10876255.00 | ಠೇವಣಿ ಹೆಚ್ಚು ಸ್ವೀಕಾರ ಆಗಿರುವುದರಿಂದ |
| 2 | ಸಿಬ್ಬಂದಿ ವೇತನ ಮತ್ತು ಭತ್ತೆಗಳು | 17674151.00 | 15000000.00 | 2674151.00 | ಹೊಸ ಸಿಬ್ಬಂದಿ ನೇಮಕಾತಿ ಆಗಿರುವುದರಿಂದ |
| 3 | ಶಾಖೆಯ ಒಳ ವಿನ್ಯಾಸದ ಖರ್ಚು | 481385.84 | 300000.00 | 181385.84 | ಎರಡು ಹೊಸ ಶಾಖೆಗಳು ಪ್ರಾರಂಭ ಆಗಿರುವುದರಿಂದ |
| 4 | ಆದಾಯ ತೆರಿಗೆ | 221367.00 | 0.00 | 221367.00 | ಆದಾಯ ತೆರಿಗೆ ಹಿಂದಿನ ವರ್ಷದ ಪಾವತಿಸಿರುವುದರಿಂದ |
| 5 | ವಿಮೆ | 463544.00 | 450000.00 | 13544.00 | ಶಾಖೆಗಳ ವಿಮೆ ಹೆಚ್ಚು ಮೊತ್ತ ಆಗಿರುವುದರಿಂದ |
| 6 | ಸಾಗಾಟ ವೆಚ್ಚ | 125011.00 | 100000.00 | 25011.00 | ಶಾಖೆಗಳಿಗೆ ಕುಂಬಾರಿಕೆ ಉತ್ಪನ್ನಗಳನ್ನು ಸಾಗಾಟ ಮಾಡಿರುವುದರಿಂದ |
| 7 | ಶಾಖೆ ಪ್ರಾರಂಭದ | 696939.67 | 500000.00 | 196939.67 | ಎರಡು ಹೊಸ ಶಾಖೆಗಳ ಬಗ್ಗೆ ಖರ್ಚು ಪ್ರಾರಂಭ ಆಗಿರುವುದರಿಂದ |
| 8 | ಸಿಬ್ಬಂದಿ ತರಬೇತಿ ಖರ್ಚು | 106402.72 | 0.00 | 106402.72 | ಹೊಸ ಸಿಬ್ಬಂದಿಗಳಿಗೆ ತರಬೇತಿ ನೀಡಿರುವುದರಿಂದ |
| 9 | ಯೋಜನ ವರದಿ ಖರ್ಚು | 5000.00 | 0.00 | 5000.00 | ಸಂಘದ ಯೋಜನಾ ವರದಿ ತಯಾರಿಸಿದ ಬಗ್ಗೆ |
| 10 | ಲೆಕ್ಕ ಪರಿಶೋಧಕರ ಸಂಭಾವನೆ | 250000.00 | 160000.00 | 90000.00 | ಲೆಕ್ಕ ಪರಿಶೋಧನಾ ನಿರ್ದೇಶಕರ ಸುತ್ತೋಲೆಯಂತೆ |

### ● ಸದಸ್ಯರಿಗೆ ಸೂಚನೆಗಳು ●

- ಸದಸ್ಯರ ವಿಳಾಸ ಬದಲಾವಣೆ ಇದ್ದಲ್ಲಿ ನೂತನ ವಿಳಾಸದ ದಾಖಲೆಗಳನ್ನು ನೀಡಿ ಸಂಘದಲ್ಲಿ ವಿಳಾಸ ತಿದ್ದುಪಡಿ ಮಾಡಿಸುವುದು.
- ಪಾಲು ಮುನಾಫೆಯನ್ನು ಉಳಿತಾಯ ಖಾತೆಗೆ ವರ್ಗಾವಣೆ ಮಾಡಲಾಗುವುದರಿಂದ ಸದಸ್ಯರು ಕಡ್ಡಾಯವಾಗಿ ಉಳಿತಾಯ ಖಾತೆಯನ್ನು ತೆರೆದು ಡಿವಿಡೆಂಡನ್ನು ಕ್ಲಪ್ತ ಸಮಯದಲ್ಲಿ ಪಾವತಿಸಲು ಸಹಕರಿಸುವುದು.
- ಸದಸ್ಯರು ಕಾಲಕಾಲಕ್ಕೆ ತಮ್ಮ ಭಾವಚಿತ್ರ, ಆಧಾರ್ ಕಾರ್ಡು, ಪಾನ್ ಕಾರ್ಡನ್ನು ಸಂಘಕ್ಕೆ (ಕೆ ವೈ ಸಿ ದಾಖಲೆಯನ್ನು) ನೀಡುವುದು.
- ಅಪೂರ್ಣ ಪಾಲು ಬಂಡವಾಳ ಹೊಂದಿರುವ ಸದಸ್ಯರು ಒಂದು ಪೂರ್ಣ ಪಾಲು ಬಂಡವಾಳದ ಮೊತ್ತವನ್ನು ಪಾವತಿಸಿ ಸದಸ್ಯತನದ ಹಕ್ಕನ್ನು ಊರ್ಜಿತವಿರಿಸುವುದು.
- ಮೃತ ಸದಸ್ಯರ ಪಾಲು ಬಂಡವಾಳ ಖಾತೆಗಳಲ್ಲಿ ವಾರೀಸುದಾರರು ತಮ್ಮ ಕ್ಲೈಮ್ ಅರ್ಜಿಯನ್ನು ಸಲ್ಲಿಸಿ ಮೃತ ಸದಸ್ಯರ ಬಾಧ್ಯತೆಗಳನ್ನು (ಠೇವಣಿ ಮತ್ತು ಸಾಲ) ಕೊನೆಗೊಳಿಸಲು ಸಹಕರಿಸುವುದು. ಇಲ್ಲವಾದಲ್ಲಿ ಕ್ಷೇಮನಿಧಿಗೆ ವರ್ಗಾಯಿಸಲು ಕ್ರಮವಿಡಲಾಗುವುದು.

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

## 2025–26 ಮತ್ತು 2026–27ನೇ ಸಾಲುಗಳ ಅಂದಾಜು ಮುಂಗಡ ಪತ್ರ

| ಕ್ರ ಸಂ. | ವಿವರ | 2024–25ನೇ ಸಾಲಿನಲ್ಲಿ ಗಳಿಸಿದ ಆದಾಯ | 2025–26ನೇ ಸಾಲಿನ ಅಂದಾಜು ಆದಾಯ | 2026–27ನೇ ಸಾಲಿನ ಅಂದಾಜು ಆದಾಯ |
|---|---|---|---|---|
| 1 | ಸಾಲಗಳಿಂದ ಬಡ್ಡಿ | 105495243.00 | 132000000.00 | 165000000.00 |
| 2 | ವಿನಿಯೋಗಗಳಿಂದ ಬಡ್ಡಿ | 34739556.00 | 40000000.00 | 50000000.00 |
| 3 | ಇತರ ಆದಾಯಗಳಿಂದ | 5233205.67 | 6500000.00 | 7500000.00 |
| 4 | ವ್ಯಾಪಾರ ಲಾಭ | 1509706.57 | 2000000.00 | 2200000.00 |
| | **ಒಟ್ಟು** | **146977711.24** | **180500000.00** | **224700000.00** |

| ಕ್ರ ಸಂ. | ವಿವರ | 2024–25ನೇ ಸಾಲಿನಲ್ಲಿ ಖರ್ಚು | 2025–26ನೇ ಸಾಲಿನ ಅಂದಾಜು ಖರ್ಚು | 2026–27ನೇ ಸಾಲಿನ ಅಂದಾಜು ಖರ್ಚು |
|---|---|---|---|---|
| 1 | ಠೇವಣಿಗಳಿಗೆ ಬಡ್ಡಿ | 80876255.00 | 110000000.00 | 125000000.00 |
| 2 | ಸಿಬ್ಬಂದಿ ವೇತನ ಮತ್ತು ಭತ್ತೆಗಳು | 17674151.00 | 20000000.00 | 20000000.00 |
| 3 | ಪ್ರಕಟಣೆ ಜಾಹೀರಾತು | 98629.94 | 200000.00 | 200000.00 |
| 4 | ತೆರಿಗೆ ಸಲಹೆಗಾರರ ಸಂಭಾವನೆ | 90612.00 | 150000.00 | 150000.00 |
| 5 | ಬ್ಯಾಂಕ್ ಕಮಿಷನ್ | 16797.34 | 50000.00 | 50000.00 |
| 6 | ಶಾಖೆ ಪ್ರಾರಂಭದ ಬಗ್ಗೆ | 696939.67 | 1000000.00 | 1000000.00 |
| 7 | ಕಟ್ಟಡ ದುರಸ್ತಿ | 37163.69 | 500000.00 | 500000.00 |
| 8 | ಗಣಕ ಯಂತ್ರ ನಿರ್ವಹಣಾ ಶುಲ್ಕ | 393817.56 | 600000.00 | 600000.00 |
| 9 | ನಿರ್ದೇಶಕರ ಭತ್ತೆ | 219000.00 | 500000.00 | 500000.00 |
| 10 | ಗುತ್ತಿಗೆ ನೌಕರರ ವೇತನ | 149731.00 | 500000.00 | 500000.00 |
| 11 | ಠೇವಣಿ ಸಂಗ್ರಹಣಾ ಕಮಿಷನ್ | 47267.00 | 100000.00 | 100000.00 |
| 12 | ದೇಣಿಗೆ | 75622.41 | 200000.00 | 200000.00 |
| 13 | ವಿದ್ಯುತ್ ಬಿಲ್ | 374215.00 | 600000.00 | 600000.00 |
| 14 | ಮಹಾಸಭೆ ಖರ್ಚು | 650465.85 | 900000.00 | 900000.00 |
| 15 | ಅತಿಥಿ ಸತ್ಕಾರ ವೆಚ್ಚ | 12899.12 | 100000.00 | 100000.00 |
| 16 | ಗೌರವ ಧನ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ | 48000.00 | 60000.00 | 60000.00 |
| 17 | ಪರಿವೀಕ್ಷಣಾ ಖರ್ಚು | 34000.00 | 100000.00 | 100000.00 |
| 18 | ಶಾಖೆಯ ಒಳ ವಿನ್ಯಾಸದ ಬಗ್ಗೆ | 481385.84 | 600000.00 | 600000.00 |
| 19 | ಆದಾಯ ತೆರಿಗೆ | 221367.00 | 300000.00 | 300000.00 |
| 20 | ಕುಶಲ ಕರ್ಮಿ ಮಾಸಿಕ ಪಿಂಚಣಿ | 11000.00 | 50000.00 | 50000.00 |
| 21 | ಕಾನೂನು ಸಲಹೆ | 30000.00 | 100000.00 | 100000.00 |
| 22 | ಪರವಾನಿಗೆ ನವೀಕರಣ | 2650.00 | 50000.00 | 50000.00 |
| 23 | ಸಭೆ, ಸಮಾರಂಭದ ಖರ್ಚು | 59665.00 | 150000.00 | 150000.00 |
| 24 | ವಿಮೆ | 463544.00 | 900000.00 | 600000.00 |
| 25 | ವಾರ್ತಾ ಪತ್ರಿಕೆ | 30709.00 | 50000.00 | 50000.00 |
| 26 | ನಿತ್ಯನಿಧಿಕಮಿಷನ್ | 8228651.00 | 10000000.00 | 10500000.00 |
| 27 | ಇತರ ಖರ್ಚು | 242827.61 | 300000.00 | 300000.00 |

| | | | | |
|---|---|---|---|---|
| 28 | ಪೂಜೆಯ ಖರ್ಚು | 69024.00 | 100000.00 | 100000.00 |
| 29 | ಮುದ್ರಣ ಮತ್ತು ಲೇಖನ ಸಾಮಾಗ್ರಿ | 486173.99 | 650000.00 | 650000.00 |
| 30 | ಎಸ್ ಎಂ ಎಸ್ ಶುಲ್ಕ | 26900.00 | 50000.00 | 50000.00 |
| 31 | ಸಿಬ್ಬಂದಿ ತರಬೇತಿ ಖರ್ಚು | 106402.72 | 200000.00 | 200000.00 |
| 32 | ಸಿಬ್ಬಂದಿ ಮತ್ತು ನಿತ್ಯನಿಧಿ ಸಂಗ್ರಾಹಕರ ಸಮವಸ್ತ್ರದ ಖರ್ಚು | 235814.66 | 300000.00 | 300000.00 |
| 33 | ನಿರ್ದೇಶಕರ ಪ್ರಯಾಣ ಭತ್ತೆ | 22852.00 | 100000.00 | 100000.00 |
| 34 | ಕಟ್ಟಡ ತೆರಿಗೆ | 174225.00 | 200000.00 | 200000.00 |
| 35 | ದೂರವಾಣಿ ಖರ್ಚು | 163109.82 | 300000.00 | 300000.00 |
| 36 | ವಾಹನ ನಿರ್ವಹಣಾ ವೆಚ್ಚ | 242291.23 | 400000.00 | 400000.00 |
| 37 | ನೀರಿನ ಬಿಲ್ಲು | 28707.52 | 50000.00 | 50000.00 |
| 38 | ತೂಕ ಮತ್ತು ಅಳತೆ | 1150.00 | 25000.00 | 25000.00 |
| 39 | ಯೋಜನಾ ವರದಿ ಖರ್ಚು | 5000.00 | 25000.00 | 25000.00 |
| 40 | ಇ – ಸ್ಟಾಂಪ್ ಕಮಿಷನ್ | 8872.04 | 50000.00 | 50000.00 |
| 41 | ಅಂಚೆ ವೆಚ್ಚ | 121437.50 | 200000.00 | 200000.00 |
| 42 | ಬಾಡಿಗೆ | 1005457.84 | 1400000.00 | 1500000.00 |
| 43 | ಲೆಕ್ಕ ಪರಿಶೋಧಕರ ಸಂಭಾವನೆ | 175000.00 | 250000.00 | 250000.00 |
| 44 | ತೋಟ ನಿರ್ವಹಣಾ ಖರ್ಚು | 5400.00 | 25000.00 | 25000.00 |
| 45 | ಪಡೆದ ಸಾಲಗಳ ಮೇಲಿನ ಬಡ್ಡಿ | 500303.00 | 750000.00 | 750000.00 |
| 46 | ಸಿಬ್ಬಂದಿ ನೇಮಕಾತಿ ಬಗ್ಗೆ | 0.00 | 200000.00 | 200000.00 |
| 47 | ಸದಸ್ಯರ ಮಾಹಿತಿ ಶಿಬಿರ | 0.00 | 100000.00 | 100000.00 |
| 48 | ಸಾಗಾಟ ವೆಚ್ಚ | 125011.00 | 200000.00 | 200000.00 |
| 49 | ಆಡಳಿತ ಮಂಡಳಿ ಸಭೆಯ ಖರ್ಚು | 61110.00 | 100000.00 | 100000.00 |
| | **ಜುಮ್ಲಾ** | **114831608.35** | **153735000.00** | **169035000.00** |

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ ಪುತ್ತೂರು ದ. ಕ.

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು – 574 201

## 2024–25ನೇ ಸಾಲಿನ ವ್ಯಾಪಾರ–ವಹಿವಾಟಿನ ತಖ್ತೆ (ಕ್ರೋಢೀಕೃತ)

| | ಖರೀದಿ | ರೂ. ಪೈ. | ಮೊತ್ತ | | ಮಾರಾಟ | ರೂ. ಪೈ. | ಮೊತ್ತ |
|---|---|---|---|---|---|---|---|
| 1 | ಆರಂಭದ ದಾಸ್ತಾನು | 1578355.11 | 1578355.11 | 1 | ಮಾರಾಟ | 3013441.00 | 3013441.00 |
| 2 | ಖರೀದಿ | 1758354.00 | 1758354.00 | 2 | ಕುಂಬಾರಿಕಾ | | |
| | | | | | ಉತ್ಪಾದನಾ ಆದಾಯ | 135866.22 | 135866.22 |
| 3 | ವ್ಯಾಪಾರದ ಖರ್ಚು | | | 3 | ಅಖೈರು ದಾಸ್ತಾನು | 1827119.46 | 1827119.46 |
| 4 | ವೃತ್ತಿ ತೆರಿಗೆ | 5000.00 | | | | | |
| 5 | ಸಾಗಾಟ ಖರ್ಚು | 125011.00 | 130011.00 | | | | |
| 6 | ವ್ಯಾಪಾರದ ಲಾಭ | 1509706.57 | 1509706.57 | | | | |
| | **ಜುಮ್ಲಾ** | | **4976426.68** | | **ಜುಮ್ಲಾ** | | **4976426.68** |

| ಸಹಿ | ಸಹಿ | ಸಹಿ | ಸಹಿ |
|---|---|---|---|
| **ಅಧ್ಯಕ್ಷರು** | **ಉಪಾಧ್ಯಕ್ಷರು** | **ನಿರ್ದೇಶಕರು** | **ಮುಖ್ಯ ಕಾರ್ಯನಿರ್ವಹಣಾಧಿಕಾರಿ** |

# ಕುಂಬಾರರ ಗುಡಿ ಕೈಗಾರಿಕಾ ಸಹಕಾರ ಸಂಘ ನಿಯಮಿತ, ಪುತ್ತೂರು, ದ. ಕ.

ಪ್ರಧಾನ ಕಛೇರಿ : ಕುಲಾಲ ಸಹಕಾರ ಭವನ, ಪುತ್ತೂರು

## ದಿನಾಂಕ 01–04–2024ರಿಂದ 31–03–2025ರ ವರೆಗಿನ ಜಮಾ ಖರ್ಚಿನ ವಿವರ (ಕ್ರೋಢೀಕೃತ)

| ಕ್ರ ಸಂ. | ವಿವರ | ಜಮಾ | ಖರ್ಚು |
|---|---|---|---|
| 1 | ಶಾಖಾ ಲೆಕ್ಕ | 845407228.96 | 845407228.96 |
| 2 | ಪಾಲು ಬಂಡವಾಳ | 2126740.00 | 4309600.00 |
| 3 | ಸದಸ್ಯರ ಠೇವಣಿಗಳು | 2775309997.38 | 2539428839.34 |
| 4 | ಸಿಬ್ಬಂದಿ ಠೇವಣಿಗಳು | 3556325.00 | 758655.00 |
| 5 | ಜಿ.ಕೇ.ಸ. ಬ್ಯಾಂಕಿನ ಸಾಲಗಳು | 235931444.00 | 235931444.00 |
| 6 | ಸದಸ್ಯರ ಸಾಲಗಳು | 1019689562.00 | 1213619375.00 |
| 7 | ಸಿಬ್ಬಂದಿ ಸಾಲಗಳು | 2204001.00 | 2500000.00 |
| 8 | ಮಾರಾಟ | 3014431.00 | 990.00 |
| 9 | ಕುಂಬಾರಿಕಾ ಉತ್ಪಾದನಾ ಆದಾಯ | 215453.00 | 79586.78 |
| 10 | ಖರೀದಿ | 1325524.00 | 3083878.00 |
| 11 | ವ್ಯಾಪಾರದ ಖರ್ಚು | | 130011.00 |
| 12 | ಸಾಲಗಳ ಮೇಲಿನ ಬಡ್ಡಿ | 107067709.00 | 1572466.00 |
| 13 | ಠೇವಣಾತಿ ಮೇಲಿನ ಬಡ್ಡಿ | 68775.00 | 73566457.00 |
| 14 | ಬ್ಯಾಂಕ್ ಸಾಲಗಳ ಮೇಲಿನ ಬಡ್ಡಿ | | 500303.00 |
| 15 | ಸಿಬ್ಬಂದಿ ವೆಚ್ಚಗಳು | | 15465785.00 |
| 16 | ಇತರ ಖರ್ಚುಗಳು | 1742491.00 | 15163877.63 |
| 17 | ಧನ ವಿನಿಯೋಗಗಳಿಂದ ಬಡ್ಡಿ | 34739556.00 | |
| 18 | ಇತರ ಆದಾಯ | 3490714.67 | 1141167.38 |
| 19 | ಹೊಂದಾಣಿಕೆ ಖಾತೆ / ಬರಲು ಬಾಕಿ | 11275791.23 | 12208396.63 |
| 20 | ಹೊಂದಾಣಿಕೆ ಖಾತೆಗಳು / ಬಾಕಿ | 269235651.57 | 269861059.63 |
| 21 | ಚರ ಆಸ್ತಿಗಳು | 306879.00 | 3854804.67 |
| 22 | ಸ್ಥಿರ ಆಸ್ತಿಗಳು | | 614626.00 |
| 23 | ಕಾಯ್ದಿರಿಸಿದ ನಿಧಿ : ಜಿ. ಕೇ. ಸ. ಬ್ಯಾಂಕಿನಲ್ಲಿ | | 3002181.00 |
| 24 | ಇತರ ವಿನಿಯೋಗಗಳು | 222515375.00 | 253340944.00 |
